**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC.No.435/2023**

**Cw-1 Pw-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸಣ್ಣ ಈರೇಶ ತಂದೆ ಚಂದಪ್ಪ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | ಃ | ಪಿಎಸ್ಐ |
| ವಾಸಸ್ಥಳ | ಃ | ಮಾನವಿ |
| ಪ್ರಮಾಣೀಕರಿಸಿದ ದಿನಾಂಕ | ಃ | 24-01-2025 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ನಾನು ದಿನಾಂಕ 02-03-2021 ರಿಂದ ದಿನಾಂಕ 08-08-2023 ರ ವರೆಗೆ ಗಬ್ಬೂರು ಪೊಲೀಸ ಠಾಣೆಯಲ್ಲಿ ಪಿಎಸ್ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ **23-06-2022** ರಂದು ನಾನು ಠಾಣೆಯಲ್ಲಿದ್ದಾಗ ತಿಪ್ಪಲದಿನ್ನಿ ಗ್ರಾಮದ ಮನೆಯ ಮುಂದೆ ಅಕ್ರಮವಾಗಿ ಮದ್ಯದ ಪೌಚಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಬಾತ್ಮಿಯ ಮೇರೆಗೆ ನಾನು ಸಿಬ್ಬಂದಿ ಮೂಲಕ ಪಂಚರನ್ನು ಠಾಣೆಗೆ ಬರಮಾಡಿಕೊಂಡು, ದಾಳಿ ವಿಷಯ ತಿಳಿಸಿ, ಸದರಿಯವರಿಂದ ಸಮ್ಮತಿ ಪಡೆದು ನಂತರ ನಾನು, ಪಂಚರು ಮತ್ತು ನನ್ನ ಸಿಬ್ಬಂದಿ ತಿಪ್ಪಲದಿನ್ನಿ ಗ್ರಾಮದ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಮನೆ ಹಾಗೂ ಹೊಟೇಲ್ ಇರುವ ಅಂಗಡಿಯಲ್ಲಿ ಮದ್ಯ ಮಾರಾಟ ಮಾಡುತ್ತಿದ್ದು ನಮ್ಮ ವಾಹನ ನೋಡಿ ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿ ಮತ್ತು ಅಲ್ಲಿ ಸೇರಿದ್ದ ಜನರು ಓಡಿ ಹೋಗಿರುತ್ತಾರೆ. ಓಡಿ ಹೋದ ವ್ಯಕ್ತಿಯ ಹೆಸರನ್ನು ತಿಳಿದುಕೊಳ್ಳಲು ಆತನ ಹೆಸರು ಅಕ್ಬರ ತಂದೆ ಕಾಸಿಂಅಲೀ ಎಂದು ತಿಳಿದುಬಂದಿದ್ದು ಸ್ಥಳದಲ್ಲಿ **330** ಎಂ.ಎಲ್ ನ **17** ಕೆ.ಎಫ್ ಟಿನ್, **180** ಎಂ.ಎಲ್ ನ **12** ಬಿ.ಪಿ ಪೌಚ್ ಒಟ್ಟು **7.770** ಲೀಟರ್ ಮದ್ಯದ ಪೌಚಗಳನ್ನು ಅಮಾನತುಪಡಿಸಿಕೊಂಡು ಒಂದು ಪೌಚ ಮತ್ತು ಒಂದು ಟಿನ್ ಅನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಲ್ಲಿ ಶೀಲ್ ಮಾಡಿ ನನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇನೆ. ಉಳಿದ ಮದ್ಯವನ್ನು ಅಮಾನತುಪಡಿಸಿಕೊಂಡು ಠಾಣೆಗೆ ತೆಗೆದುಕೊಂಡು ಬಂದು ಪ್ರಕರಣ ದಾಖಲಿಸುವಂತೆ ಮಧ್ಯಾಹ್ನ **1-30** ಕ್ಕೆ ಎಸ್ಹೆಚ್ಓ ರವರಿಗೆ ದೂರು ನೀಡಿರುತ್ತೇನೆ. ಪಂಚನಾಮೆಯನ್ನು ಬೆಳಿಗ್ಗೆ **11-30** ರಿಂದ **12-30** ಗಂಟೆಯವರೆಗೆ ಮಾಡಿರುತ್ತೇನೆ.

ಪಂಚನಾಮೆಯನ್ನು ನಿಪಿ**-1** ಎಂದು, ಸಾಕ್ಷಿಯ ಸಹಿಯನ್ನು ನಿಪಿ**-1(**ಎ**)** ಎಂದು ಗುರುತಿಸಲಾಯಿತು. ದೂರನ್ನು ನಿಪಿ**-2** ಎಂದು, ಸಾಕ್ಷಿಯ ಸಹಿಯನ್ನು ನಿಪಿ**-2(**ಎ**)** ಎಂದು

ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಖಾಲಿ ಪೌಚ ಮತ್ತು ಖಾಲಿ ಟಿನ್ ಅನ್ನು **MO-1** ಮತ್ತು **2** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ.ಎನ್ ವಕೀಲರಿಂದ.**

ಬಾತ್ಮಿ ಬಂದಾಗ ಅಂದಾಜು ಬೆಳಿಗ್ಗೆ 10-00 ಗಂಟೆ ಆಗಿತ್ತು. ಚಾಸಾ-4 ದೇವೆಂದ್ರ ಇವರ ಮೂಲಕ ಪಂಚರನ್ನು ಬರಮಾಡಿಕೊಂಡಿರುತ್ತೇವೆ. ತಿಪ್ಪಲದಿನ್ನಿ ಗ್ರಾಮ ಠಾಣೆಯಿಂದ 15 ಕಿ.ಮೀ ಅಂತರದಲ್ಲಿದೆ. ಠಾಣೆಯಿಂದ ತಿಪ್ಪಲದಿನ್ನಿ ಗ್ರಾಮಕ್ಕೆ ಹೋಗಲು ಮಧ್ಯದಲ್ಲಿ ಅನೇಕ ಗ್ರಾಮಗಳು ಬರುತ್ತವೆ ಎಂದರೆ ಸರಿ. ಮದ್ಯ ಅಮಾನತುಪಡಿಸಿಕೊಂಡ ಸ್ಥಳವು ಸಾರ್ವಜನಿಕ ಹೊಟೇಲ್ ಆಗಿರುತ್ತದೆ ಎಂದರೆ ಸರಿ. ಹೊಟೇಲ್‌ನಲ್ಲಿ ಸಾಕಷ್ಟು ಜನರು ಇರಬಹುದು ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಹೊಟೇಲ್‌ದಲ್ಲಿ ಇದ್ದವರನ್ನು ವಿಚಾರಣೆ ಮಾಡಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಓಡಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹೊಟೇಲ್ ಜಾಗ ಆರೋಪಿಯ ಹೆಸರಿನಲ್ಲಿ ಇರುತ್ತದೆ ಆ ಕುರಿತು ಯಾವುದೇ ದಾಖಲೆ ಪಡೆದುಕೊಂಡಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸ್ಥಳದಲ್ಲಿ ವಿಚಾರಣೆ ಮಾಡಿದ್ದರಿಂದ ತಿಳಿದುಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಹೊಟೇಲ್ ನಡೆಸುತ್ತಿದ್ದ ಬಗ್ಗೆ ದಾಖಲೆ ಪಡೆದುಕೊಂಡಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಉಪಜೀವನಕ್ಕಾಗಿ ಮನೆಯ ಒಂದು ಭಾಗವನ್ನೇ ಹೊಟೇಲ್ ಆಗಿ ಮಾಡಿಕೊಂಡಿರುತ್ತಾರೆ ಆ ಕುರಿತು ಯಾವುದೇ ಸಕ್ಷಮ ಪ್ರಾಧಿಕಾರದಿಂದ ಪರವಾನಿಗೆ ಪಡೆದುಕೊಂಡಿರುವುದಿಲ್ಲ. ಅಮಾನತುಪಡಿಸಿಕೊಂಡ ಮದ್ಯದ ಪೌಚ ಮತ್ತು ಟಿನ್‌ಗಳು ಪರವಾನಿಗೆ ಪಡೆದ ಮದ್ಯದ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿ. ಸದರಿ ದಿನ ಆರೋಪಿತನ ಹೊಟೇಲ್‌ನಿಂದ ಅಕ್ರಮ ಮದ್ಯದ ಪೌಚ ಮತ್ತು ಟಿನ್‌ಗಳನ್ನು ಅಮಾನತುಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕಚೇರಿಯ ಅಂಕೆ-ಸಂಖ್ಯೆಗಳಿಗೋಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.